## ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಮೂಡಬಿದ್ರೆ

**ಸಿ.ಸಿ.ನಂಃ416/2024**

ಪಿರ್ಯಾದುದಾರರು ಃ ಮೆಸರ್ಸ್ ಶ್ರೀರಾಮ್ ಫೈನಾನ್ಸ್ ಲಿಮಿಟೆಡ್
ಮೂಡಬಿದ್ರೆ.
ಪ್ರತಿನಿಧಿಸುವವರುಃ ಮುಕ್ತ್ಯಾರರು,
ಶ್ರೀ ಭಾಸ್ಕರ್

-ವಿರುದ್ಧ-

ಆರೋಪಿ ಃ ಅಣ್ಣಯ್ಯ
ಬಿನ್ ಚಿನ್ನ ಸ್ವಾಮಿ,
ವಾಸಃ **5-127/2**, ಅರವಿಂದ ನಿವಾಸ,
ಕೆರೆದಡ್ಡು, ಕುಕ್ಕುಂದೂರು ಅಂಚೆ,
ಕಾರ್ಕಳ ತಾಲೂಕು, ದ.ಕ.

ಶ್ರೀಮತಿ ಕಾವೇರಮ್ಮ ಎಂ., ಎಲ್ಎಲ್.ಬಿ., ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ಮೂಡಬಿದ್ರೆ ಆದ ನಾನು ನಿಮ್ಮನ್ನು ಈ ಕೆಳಕಂಡಂತೆ ಆಪಾದನೆಗೆ ಗುರಿಪಡಿಸಿರುತ್ತೇನೆ.

### ಆರೋಪಣೆ

ಆರೋಪಿಯಾದ ನೀವು, ಶ್ರೀ ಚಿರಂಜೀವಿ ಜಿ.ಎಂ. ಎಂಬುವವರು ಫಿರ್ಯಾದಿದಾರರಿಂದ ಪಡೆದ ವಾಹನ ಸಾಲಕ್ಕೆ ಜಾಮೀನುದಾರರಾಗಿದ್ದು, ಸದರಿ ಸಾಲದ ಮರುಪಾವತಿಗಾಗಿ ಬೆಳ್ತಂಗಡಿ ತಾಲೂಕಿನ ನಾರಾವಿ ಶಾಖೆಯ "ದಿ ಸೌತ್ ಕೆನರಾ ಡಿಸ್ಟ್ರಿಕ್ಟ್ ಸೆಂಟ್ರಲ್ ಕೊ-ಅಪರೇಟಿವ್ ಬ್ಯಾಂಕ್ ಲಿಮಿಟೆಡ್" ನ ದಿನಾಂಕ **17-05-2024** ರ ಚೆಕ್ಕು ಸಂಖ್ಯೆ **037410** ನ್ನು ರೂ.**11,00,000/-** ಗಳಿಗೆ ಕೊಟ್ಟಿದ್ದು, ಸದ್ರಿ ಚೆಕ್ಕಿನ ಬಾಬ್ತು ಹಣವನ್ನು ಪಡೆಯಲು ಫಿರ್ಯಾದುದಾರರು ತಮ್ಮ ಖಾತೆಯನ್ನು ಹೊಂದಿದ ಮೂಡಬಿದ್ರೆ ಶಾಖೆಯ ಎಕ್ಸಿಸ್ ಬ್ಯಾಂಕ್ ಲಿಮಿಟೆಡ್ ಇಲ್ಲಿ ಚೆಕ್ಕನ್ನು ಹಾಜರುಪಡಿಸಿದಾಗ ನಿಮ್ಮ ಚೆಕ್ಕು ತಿರಸ್ಕೃತಗೊಂಡು "ಸಾಕಷ್ಟು ಹಣ ಇಲ್ಲ" ಎಂಬ ಹಿಂಬರಹದೊಂದಿಗೆ ಅಮಾನ್ಯಗೊಂಡಿರುತ್ತದೆ. ಈ ಬಗ್ಗೆ ಫಿರ್ಯಾದುದಾರರು ದಿನಾಂಕ **05.06.2024** ರಂದು ನಿಮಗೆ ನೋಟೀಸನ್ನು ಕಳುಹಿಸಿದ್ದು, ಸದ್ರಿ ನೋಟೀಸು ನಿಮಗೆ ತಲುಪಿದ್ದರೂ ಸಹ ನೀವು ಅಮಾನ್ಯಗೊಂಡ ಚೆಕ್ಕಿನ ಬಾಬ್ತು ಹಣವನ್ನು ಫಿರ್ಯಾದಿದಾರರಿಗೆ ಪಾವತಿ ಮಾಡಿರುವುದಿಲ್ಲ. ಆದ್ದರಿಂದ ನೀವು ವರ್ಗಾವಣೀಯ ಲಿಖಿತ ಪತ್ರಗಳ ಅಧಿನಿಯಮ ಕಲಂ **138** ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಸಹಿ/-

ದಿನಾಂಕಃ **06-12-2024**

**(ಕಾವೇರಮ್ಮ ಎಂ.)**
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಮೂಡಬಿದ್ರೆ

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಮೂಡಬಿದ್ರೆ**

**ಸಿ.ಸಿ.ನಂಃ416/2024**

ಪಿರ್ಯಾದುದಾರರು ಃ ಮೆಸರ್ಸ್ ಶ್ರೀರಾಮ್ ಫೈನಾನ್ಸ್ ಲಿಮಿಟೆಡ್

-ವಿರುದ್ಧ-

ಆರೋಪಿ ಃ ಅಣ್ಣಯ್ಯ

ಪ್ರಶ್ನೆ 1ಃ ನಿಮ್ಮ ಮೇಲೆ ಮಾಡಿರುವ ಆರೋಪಗಳನ್ನು ಕೇಳಿ ಅರ್ಥ ಮಾಡಿಕೊಂಡಿರುವಿರಾ?

ಉತ್ತರಃ ಹೌದು

ಪ್ರಶ್ನೆ 2ಃ ನೀವು ಮೇಲ್ಕಂಡ ಆರೋಪಣೆಯನ್ನು ಒಪ್ಪಿಕೊಳ್ಳಲು ಇಚ್ಚಿಸುತ್ತೀರಾ ಅಥವಾ ವಿಚಾರಣೆಯಾಗಬೇಕೋ?

ಉತ್ತರಃ ವಿಚಾರಣೆಯಾಗಬೇಕು. ನಾನು ಜಾಮೀನುದಾರನಾದ ಬಗ್ಗೆ ನನಗೆ ಏನೂ ಗೊತ್ತಿಲ್ಲ

(ಮೇಲ್ಕಂಡ ಆಪಾದನೆಯನ್ನು ಆರೋಪಿಗೆ ಅರ್ಥವಾಗುವ ಕನ್ನಡ ಭಾಷೆಯಲ್ಲಿ ಓದಿ ಹೇಳಿದ್ದು, ಆತನು ನೀಡಿದ ಉತ್ತರವನ್ನು ಮುಕ್ತ ನ್ಯಾಯಾಲಯದಲ್ಲಿ ಯಥಾವತ್ತಾಗಿ ದಾಖಲಿಸಿರುತ್ತೇನೆ)

ಸಹಿ/-

ದಿನಾಂಕಃ 06-12-2024

**(ಕಾವೇರಮ್ಮ ಎಂ.)**
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಮೂಡಬಿದ್ರೆ